**<u>ಸಿವಿಲ್ ಜಡ್ಜ್ ಹಾಗೂ ಪ್ರ.ದ.ನ್ಯಾದಃ ನ್ಯಾಯಾಲಯಃ ನ.ರಾ.ಪುರ</u>**

**ಸಿ.ಸಿ ಃ 586/2019**

ಸಾಕ್ಷಿದಾರರ ಹೆಸರು ಃ ಬಸಂತ್ ಕುಮಾರ್ ಎಸ್ ಕೆ

ಸಿ.ಡಬ್ಲ್ಯೂ- **26**

ತಂದೆಯ ಹೆಸರು ಃ ಕೃಷ್ಣಮೂರ್ತಿ

ಪಿ.ಡಬ್ಲ್ಯೂ- **14**

ವಯಸ್ಸು ಃ **43** ವರ್ಷ

ಉದ್ಯೋಗ ಃ ಹೆಚ್ ಸಿ , ನ ರಾ ಪುರ ಪೊಲೀಸ್ ಠಾಣೆ

ವಾಸಸ್ಥಳ ಃ ನ ರಾ ಪುರ

ದಿನಾಂಕಃ **11.03.2025** ರಂದು ಪ್ರಮಾಣವಚನ ಬೋಧಿಸಲಾಯಿತು.

<u>ಃಃ ಮುಖ್ಯ ವಿಚಾರಣೆ ಃ ಮಾನ್ಯ ಃ ಎಪಿಪಿಯವರಿಂದ ಃಃ</u>

ನಾನು ಕಳೆದ 2 ವರ್ಷಗಳಿಂದ ನ.ರಾ.ಪುರ ಪೊಲೀಸ್ ಠಾಣೆಯಲ್ಲಿ ಹೆಚ್ ಸಿ ಯಾಗಿ ಕರ್ತವ್ಯ ನಿರ್ವಹಿಸುತ್ತಿರುತ್ತೇನೆ.

ದಿನಾಂಕಃ 21.04.2018 ರಂದು ಬೆಳಗ್ಗೆ 10 ಗಂಟೆ ಸಮಯಕ್ಕೆ ಚಾಸಾ-33 ರವರು ಠಾಣೆಯಲ್ಲಿರುವಾಗ ಚಾಸಾ-23, 24, 25, ನನ್ನನ್ನು ಹಾಗೂ ಚಾಸಾ-27 ರಿಂದ 31 ರವರನ್ನು ಕರೆದು ದಾಳಿ ಮಾಡುವುದು ಇದೆ ಎಂದು ನಮಗೆ ವಿಚಾರ ತಿಳಿಸಿದ್ದು ನಾವು ಸಹಕರಿಸಲು ಒಪ್ಪಿ , ನಾವೆಲ್ಲರೂ ಆರೋಪಿ ಮನೆಯ ಹಿಂದುಗಡೆಯಿಂದ ತೋಟದಲ್ಲಿ ಹೋಗಿ ದಾಳಿ ನಡೆಸಿದಾಗ ಅಲ್ಲಿ ಎರಡು ಲಾರಿಗಳಿದ್ದು ಅದರಲ್ಲಿ ಒಂದು ಲಾರಿಯಲ್ಲಿ 300 ಚೀಲ ಅಕ್ಕಿ ಮೂಟೆಗಳು ಇದ್ದು ಅವುಗಳನ್ನು ಟಾರ್ಪಲ್ ನಲ್ಲಿ ಮುಚ್ಚಿ ಇಡಲಾಗಿತ್ತು. ಮತ್ತೊಂದು ಲಾರಿಯಲ್ಲಿ 100 ಚೀಲ ಅಕ್ಕಿ ಮೂಟೆಗಳು ಇದ್ದು, ಅಲ್ಲೆ ಇದ್ದ ಕೆಲಸಗಾರರು 5-6 ಜನರು ಇದ್ದು ಅವರನ್ನು ವಿಚಾರಿಸಿದಾಗ ಸದರಿ ಲಾರಿ ಮತ್ತು ಅಕ್ಕಿ ಮೂಟೆಗಳು ಆರೋಪಿಯದ್ದು ಎಂದು ತಿಳಿದು ಬಂದಿರುತ್ತದೆ. ಕೂಡಲೇ ನಾವು ಪಂಚರಾದ ಚಾಸಾ-1 ರಿಂದ 3 ರವರ ಸಮಕ್ಷಮ ಚಾಸಾ-1 ರವರು ವಿಚಾರಿಸಿದಾಗ ಆರೋಪಿ ಬಳಿ ಅಕ್ಕಿ ಮೂಟೆ ಸಾಗಾಣಿಕೆ ಮಾಡಲು ಯಾವುದೇ ಪರವಾನಗಿ ಇಲ್ಲ ಎಂದು ಕೆಲಸಗಾರರು ತಿಳಿಸಿರುತ್ತಾರೆ ಮತ್ತು ಅಕ್ಕಿ ಮೂಟೆಗಳನ್ನು ಲಾರಿಯಲ್ಲಿ ಲೋಡ್ ಮಾಡಲು ನಮ್ಮನ್ನು ಆರೋಪಿ ನೇಮಕ

ಮಾಡಿರುತ್ತಾರೆಂದು ನಮಗೆ ತಿಳಿಸಿರುತ್ತಾರೆ. ನಂತರ ಚಾಸಾ-1 ರವರು ದೂರು ನೀಡುವುದಾಗಿ ಚಾಸಾ-33 ರವರಿಗೆ ತಿಳಿಸಿದ್ದು, ಈ ಸಂಬಂಧ ಚಾಸಾ-33 ರವರು ಬೆಳಗ್ಗೆ 11 ರಿಂದ ಸಂಜೆ 5 ಗಂಟೆಯವರೆಗೆ ಮಹಜರ್ ಮಾಡಿ ಮಹಜರ್ ಮೂಲಕ ಲಾರಿ ಮತ್ತು ಮೂಟೆಗಳನ್ನು ಹಾಗೂ ತೂಕದ ಮಿಷಿನ್, ಖಾಲಿ ಗೋಣಿ ಚೀಲಗಳು ಹಾಗೂ ಗೋಡನ್ ನಲ್ಲಿ ಅಕ್ಕಿ ಮೂಟೆಗಳನ್ನು ಜಪ್ತು ಮಾಡಿಕೊಂಡಿರುತ್ತೇವೆ. ಸದರಿ ಸಮಯದಲ್ಲಿ ಪೋಟೋ ತೆಗೆದಿರುತ್ತೇವೆ. ಈ ಸಂಬಂಧ ನಾನು ಹೇಳಿಕೆ ನೀಡಿರುತ್ತೇನೆ.

ಸಾಕ್ಷಿ ಮಹಜರನ್ನು ನೋಡಿ ಗುರುತಿಸಿದ್ದು ಅದು ಈಗಾಗಲೇ ನಿಪಿ-1,ಸಾಕ್ಷಿಯ ಸಹಿಯನ್ನು ನಿಪಿ-1(ಡಿ) ಎಂದು ಗುರುತಿಸಲಾಯಿತು. ಸಾಕ್ಷಿ ಪೋಟೋಗಳಲ್ಲಿ ತನ್ನನ್ನು ನೋಡಿ ಗುರುತಿಸಿದ್ದು ಅವು ಈಗಾಗಲೇ ನಿಪಿ-2 ರಿಂದ 11 ಎಂದು ಗುರುತಿಸಲಾಗಿದೆ.

<u>ಪಾಟೀ ಸವಾಲು ಆರೋಪಿ ಪರ ಶ್ರೀ.ಜಿ ಡಿ ವಕೀಲರಿಂದ ಃ</u>

ದಾಳಿಗೆ ಹೋಗುವ ಮೊದಲೇ ನಮ್ಮ ಠಾಣೆಯಲ್ಲಿ ದೂರು ದಾಖಲಾಗಿರುವ ಬಗ್ಗೆ ನನಗೆ ಗೊತ್ತಿಲ್ಲ. ದೂರು ದಾಖಲಾಗುವ ಮೊದಲೇ ನಾವು ದಾಳಿಗೆ ಹೋಗಿರುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಆರೋಪಿಯು ಶ್ರೀ ವೆಂಕಟೇಶ್ವರ ಫ್ಲೋರ್ ಮಿಲ್ ಇಟ್ಟುಕೊಂಡಿರುತಾರೆಂದರೆ ಸರಿ. ನಮ್ಮ ಠಾಣೆಯಿಂದ ಆರೋಪಿಯ ಫ್ಲೋರ್ ಮಿಲ್ 300 ಅಡಿ ದೂರದಲ್ಲಿರುತ್ತದೆ ಎಂದರೆ ಸರಿ. ಆರೋಪಿ ಗೋಡನ್ ಗೆ ಅಕ್ಕಿ ಬರಬೇಕಾದರೆ ಹಳೇ ಪೋಸ್ಟ್ ಆಫೀಸ್ ನಿಂದ ಬರಬೇಕು ಎಂದರೆ ಸರಿ. ಸದರಿ ಲಾರಿಗಳು ಯಾರಿಗೆ ಸಂಬಂಧಪಟ್ಟಿದೆಂದು ಅದರ ಸಂಖ್ಯೆಗಳು ನನಗೆ ಗೊತ್ತಿರುವುದಿಲ್ಲ ಎಂದರೆ ಸರಿ. ಅಕ್ಕಿ ವ್ಯಾಪಾರ ಮಾಡುವ ಪರವಾನಗಿ ಆರೋಪಿ ಹೊಂದಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಸದರಿ ಅಕ್ಕಿ ಮೂಟೆಗಳನ್ನು ಏಕೆ ಜಪ್ತು ಮಾಡಿಕೊಂಡಿರುತ್ತೀರಿ ಎಂದು ಕೇಳಿದ ಪ್ರಶ್ನೆ ಸಾಕ್ಷಿಯು ಸದರಿ ಅಕ್ಕಿ ಮೂಟೆಗಳು ನ್ಯಾಯಬೆಲೆ ಅಂಗಡಿಯಲ್ಲಿ ಅಕ್ರಮವಾಗಿ ಪಡೆದುಕೊಂಡು ಆರೋಪಿ ವ್ಯವಹಾರ ಮಾಡುತ್ತಿರುವ ಸಂಬಂಧ ಜಪ್ತು ಮಾಡಿಕೊಂಡಿರುತ್ತೇವೆಂದು ನುಡಿಯುತ್ತಾರೆ. ನ್ಯಾಯಬೆಲೆ ಅಂಗಡಿಯಿಂದ ಆರೋಪಿ ಅಕ್ಕಿ ಅವ್ಯವಹಾರ ಮಾಡುತ್ತಿದ್ದಾನೆಂದು ದೂರು ಬಂದಿರುವ ಸಂಬಂಧ ನನಗೆ ಮಾಹಿತಿ ಇರುವುದಿಲ್ಲ. ಸದರಿ ಸ್ಥಳದಲ್ಲಿರುವ ಅಕ್ಕಿ ಮೂಟೆಗಳು ನ್ಯಾಯ ಬೆಲೆ ಅಂಗಡಿಯ ಮೂಟೆಗಳು ಎಂದು ನನಗೆ ಖುದ್ದು ಮಾಹಿತಿ ಇರುವುದಿಲ್ಲ ಎಂದರೆ ಸರಿ. ಆರೋಪಿ ಅಕ್ಕಿ ವ್ಯಾಪಾರ ಮಾಡಲು ಲೈಸೆನ್ಸ್ ಇತ್ತು, ಉದ್ದೇಶಪೂರ್ವಕವಾಗಿ ಚಾಸಾ-1 ರವರ ಮಾತು ಕೇಳಿಕೊಂಡು ಅಕ್ಕಿ ಮೂಟೆಗಳನ್ನು ಜಪ್ತು

ಮಾಡಿಕೊಂಡಿರುತ್ತೇವೆಂದರೆ ಸರಿಯಲ್ಲ. ನನ್ನ ಸಮಕ್ಷಮ ಯಾವುದೇ ಮಹಜರ್ ಮಾಡಿರುವುದಿಲ್ಲ, ಫೋಟೋ ತೆಗೆದಿರುವುದಿಲ್ಲ, ಸ್ಥಳದಲ್ಲಿ ಯಾವುದೇ ಕೆಲಸಗಾರರು ಇರಲಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಃಮರುವಿಚಾರಣೆ ಇಲ್ಲಃ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸ ಇ ಎ ಒ

ಪ್ರ.ದ.ನ್ಯಾದಂಃ ನ.ರಾ.ಪುರ.

ಸಾಕ್ಷಿ ಸಹಿಃ